ಆ) ಬೆರಳಚ್ಚುಗಾರರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿ ನೀಡುವಾಗ ಯಾವ ನಿಯಮವನ್ನು ಅನುಸರಿಸಲಾಗುತ್ತಿದೆ.

ಇ) ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿಯನ್ನು ನೀಡುವಾಗ ಎಲ್ಲಾ ಅರ್ಹತೆಯನ್ನು ಹೊಂದಿರುವ ಬೆರಳಚ್ಚುಗಾರರನ್ನು ಪರಿಗಣಿಸದಿರಲು ಕಾರಣಗಳೇನು,

ಈ) ಇಲಾಖೆಯ ಪ್ರಾರಂಭವಾದಂದಿನಿಂದ ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ ಪದೋನ್ನತಿಯನ್ನು ನೀಡದಿರಲು ಕಾರಣಗಳೇನು?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) 1. ದ್ವಿತೀಯ ದರ್ಜೆ ಸಹಾಯಕರು – 217

2. ಬೆರಳಚ್ಚುಗಾರರು – 112

ಆ) ಮತ್ತು ಇ) ದಿ: 30/10/75ರ ಸರ್ಕಾರಿ ಕಾರ್ಯಕಾರಿ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿಸಿ:100:ಸಿಎಂಡಿ:74 ರನ್ವಯ ಪದೋನ್ನತಿ ನೀಡಲಾಗುತ್ತಿದೆ.

ಈ) ಇಲಾಖೆಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಲು ಕ್ರಮ ವಹಿಸಿರುವುದರಿಂದ ನಿಯಮಗಳನುಸಾರ ಪದೋನ್ನತಿ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು. ಈ ಮಧ್ಯಂತರ ಅವಧಿಯಲ್ಲಿ ಪದೋನ್ನತಿ ನೀಡಲಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಇಲಾಖೆಯವರು ಬಡ್ತಿ ಕೊಡುವುದರಲ್ಲಿ ತೀರಾ ಅನ್ಯಾಯ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ಸುದ್ದಿ ಮತ್ತು ವಿಚಾರಗಳಿವೆ. ಆದ್ದರಿಂದ ಬಡ್ತಿಯಲ್ಲಿ ನೀವು ನ್ಯಾಯ ದೊರಕಿಸಬೇಕು. ಅದಕ್ಕೇನು ನೀವು ಮಾಡುತ್ತೀರಿ? ಇದು ಬಹಳ ಪ್ರಾಮುಖ್ಯವಾದದ್ದು. ಇದರ ಜೊತೆಗೆ, ಇದೇ ತರಹ ಬೆರಳಚ್ಚುಗಾರರು ಇಡೀ ರಾಜ್ಯದಾದ್ಯಂತ ಸುಮಾರು ಹತ್ತಾರು ಸಾವಿರ ಜನರಿದ್ದಾರೆ. ಹತ್ತಿಪ್ಪತ್ತು ವರ್ಷವಾದರೂ ಅವರುಗಳಿಗೆ ಸಂಪೂರ್ಣವಾಗಿ ಬಡ್ತಿ ಸಿಗದಿರುವಂಥಾದ್ದು ಇದೆ. ಇದು ಕೇವಲ ನಿಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು. ಆದರೆ, ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಇದೇ ಪರಿಸ್ಥಿತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ವಿಧಾನಗಳು ಬಂದು ಬೆರಳಚ್ಚುಗಾರರನ್ನು ಸಂಪೂರ್ಣವಾಗಿ ಕಡೆಗಾಣಿಸತಕ್ಕಂಥ ವ್ಯವಸ್ಥೆಯಾಗಿದೆ. ನಿಮ್ಮ ಇಲಾಖೆಯಲ್ಲಾದರೂ ಇವರಿಗೆ ಸಂಪೂರ್ಣವಾಗಿ ಬಡ್ತಿ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ ಈಗ ನಮ್ಮ ಇಲಾಖೆಯಲ್ಲಿ ಸೆಕೆಂಡ್ ಡಿವಿಜನ್ ಅಸಿಸ್ಟೆಂಟ್ಸ್ 217 ಜನ ಇದ್ದಾರೆ. ಸೀನಿಯರ್ ಟೈಪಿಸ್ಟ್ಸ್ 112 ಜನ ಇದ್ದಾರೆ. ಸರ್ಕಾರದ ಆದೇಶ 30.10.1975ರ ಪ್ರಕಾರ ಈಗಾಗಲೇ ನಾವು ಸುಮಾರು 185 ಜನರಿಗೆ ಪ್ರಮೋಷನ್ ಅನ್ನು ನೀಡಿದ್ದೇವೆ. ಟೈಪಿಸ್ಟ್ ಮತ್ತು ಸೆಕೆಂಡ್ ಡಿವಿಜನ್ ಅಸಿಸ್ಟೆಂಟ್ಸ್‌ಗೆ ನಾವು ಈಗಾಗಲೇ ಪ್ರಮೋಷನ್ ನೀಡಿದ್ದೇವೆ. ಇನ್ನೇನು ನಮ್ಮಲ್ಲಿ ಪ್ರಮೋಷನ್ ಆಗಬೇಕಾಗಿದೆ, ನಾವೊಂದು ಸಿ ಅಂಡ್ ಆರ್ ರೂಲ್ಸ್ ಮಾಡುತ್ತಿದ್ದೇವೆ. ಆ ಸಿ ಅಂಡ್ ಆರ್ ರೂಲ್ಸ್ ಆದ ತಕ್ಷಣ ಯಾರ್ಯಾರಿಗೆ ಅರ್ಹತೆ ಇದೆ, ಹಾಗೆ ಅರ್ಹತೆ ಇದ್ದಲ್ಲಿ, ಅವರಿಗೆ ತಕ್ಷಣ ನಾವು ಪ್ರಮೋಷನ್ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಸವದತ್ತಿ ತಾಲ್ಲೂಕಿನಲ್ಲಿ ರೈತರ ಬೆಳೆ ಏಮೆ

607(6250) : ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕಿನಲ್ಲಿ ಮಂಜೂರಾದ ಬೆಳೆ ವಿಮೆಯನ್ನು ಧಾರವಾಡ ಗ್ರಾಮೀಣ, ನವಲಗುಂದ ಮತ್ತು ಇತರೆ ಪ್ರದೇಶಗಳಿಗೆ ಹೋಲಿಸಿದಾಗ ವ್ಯತ್ಯಾಸವಾಗಿರುವುದೇಕೆ;

ಆ) ಸವದತ್ತಿ ತಾಲ್ಲೂಕಿನ ಕೆಲವೊಂದು ಹಳ್ಳಿಗಳ ಜಮೀನು ಧಾರವಾಡ ಗ್ರಾಮೀಣ ಜಮೀನುಗಳು ಕೂಡಿ ಇರುವುದರಿಂದ ಬೆಳೆ ವಿಮೆ ಮಂಜೂರಿಯಲ್ಲಿ ವ್ಯತ್ಯಾಸಕ್ಕೆ ಕಾರಣವೇನು;

ಇ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರದ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ಈ ಯೋಜನೆಯ ಅನುಷ್ಠಾನದ ಬಗ್ಗೆ ಮಾರ್ಗಸೂಚಿಯನ್ನು ರೂಪಿಸಿರುತ್ತದೆ. ಮಾರ್ಗಸೂಚಿಯ ಪ್ರಕಾರ, ಒಂದು ಅಧಿಸೂಚಿತ ಪ್ರದೇಶದಲ್ಲಿ ಒಂದು ಅಧಿಸೂಚಿತ ಬೆಳೆಗೆ ವಿಮೆ ಮಾಡಿಸಿದ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದಲ್ಲಿ, ಬೆಳೆ ಕಟಾವು ಪ್ರಯೋಗಗಳಿಂದ ಕಂಡು ಹಿಡಿಯಲಾದ ವಾಸ್ತವಿಕ ಇಳುವರಿಯು ಆ ಬೆಳೆಗೆ ನಿಗದಿಪಡಿಸಿದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇರಬೇಕು. ಇಳುವರಿಯ ಕೊರತೆಗನುಗುಣವಾಗಿ ಆ ಪ್ರದೇಶದಲ್ಲಿ ಆ ಬೆಳೆಗೆ ವಿಮೆ ಮಾಡಿಸಿದ ಎಲ್ಲಾ ರೈತರೂ ಬೆಳೆ ವಿಮಾ ನಷ್ಟ ಪರಿಹಾರ ಪಡೆಯುತ್ತಾರೆ. ಯೋಜನೆಯ ಪ್ರಾರಂಭದಲ್ಲಿ ಬೆಳೆಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗುತ್ತಿದೆ. ತಾಲ್ಲೂಕಿನಿಂದ ತಾಲ್ಲೂಕಿಗೆ ಮತ್ತು ಹೋಬಳಿಯಿಂದ ಹೋಬಳಿಗೆ ವಾಸ್ತವಿಕ ಇಳುವರಿ ಪ್ರಾರಂಭಿಕ ಇಳುವರಿ ಹಾಗೂ ಇಳುವರಿಯಲ್ಲಿನ ಕೊರತೆ ವ್ಯತ್ಯಾಸವಿರುವುದರಿಂದ, ವಿವಿಧ ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಇತ್ಯರ್ಥಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿಯೂ ವ್ಯತ್ಯಾಸವಿರುತ್ತದೆ.

ಉದಾ: 2003ರ ಮುಂಗಾರು ಹಂಗಾಮಿನಲ್ಲಿ ಸವದತ್ತಿ ತಾಲ್ಲೂಕಿನ ಎಲ್ಲಾ ಹೋಬಳಿಗಳಲ್ಲಿ ಹಾಗೂ ಪಕ್ಷದ ಧಾರವಾಡ ಜಿಲ್ಲೆಯ ಅಮ್ಮಿನಭಾವಿ ಮತ್ತು ಹೋಬಳಿಯಲ್ಲಿ ಮತ್ತು ಗದಗ ಜಿಲ್ಲೆಯ ನರಗುಂದ ಹೋಬಳಿಯಲ್ಲಿ ಅಧಿಸೂಚಿಸಲಾದ ಬೆಳೆಗಳ ಪ್ರಾರಂಭಿಕ ಇಳುವರಿ, ವಾಸ್ತವಿಕ ಇಳುವರಿ, ಇಳುವರಿ ಕೊರತೆ ಹಾಗೂ ಬೆಳೆವಾರು ಶೇಕಡಾ ಬೆಳೆ ವಿಮಾ ನಷ್ಟ ಪರಿಹಾರದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಪ್ರಶ್ನೆಗೆ ಉತ್ತರವು ಉಪ ಪ್ರಶ್ನೆ (ಅ) ರಲ್ಲಿಯೇ ಇರುತ್ತದೆ. ಸವದತ್ತಿ ತಾಲ್ಲೂಕಿನ ಕೆಲವು ಹಳ್ಳಿಗಳ ಜಮೀನು ಧಾರವಾಡ ಜಿಲ್ಲೆಯ ಹಳ್ಳಿಗಳ ಜಮೀನಿಗೆ ಕೂಡಿಕೊಂಡು ಇದ್ದರೂ ಸಹ ಆ ಜಮೀನುಗಳ ಹೋಬಳಿಗಳು ಬೇರೆ ಬೇರೆಯಾಗಿರುತ್ತವೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ : ಅಧ್ಯಕ್ಷರೇ ಉತ್ತರವನ್ನೇನೋ ಒದಗಿಸಿದ್ದಾರೆ. ಕೃಷಿ ವಿಮೆ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಸವದತ್ತಿ ತಾಲ್ಲೂಕಿನಲ್ಲಿ ಬಹಳಷ್ಟು ವ್ಯತ್ಯಾಸವಾಗಿದೆ ಮತ್ತು ಪಕ್ಕದಲ್ಲಿರತಕ್ಕಂಥ ಧಾರವಾಡ ಗ್ರಾಮೀಣ ಮತ್ತು ನಮ್ಮದು ಎರಡೂ ಭೂಮಿಗಳು ಒಟ್ಟಿಗಿರುವುದರಿಂದ ಪಕ್ಕದಲ್ಲಿ ಹುಬ್ಬಳ್ಳಿಯಲ್ಲಿ ಬಹಳಷ್ಟು ವ್ಯತ್ಯಾಸ ಇದ್ದು, ನನ್ನಲ್ಲಿ ಬಹಳಷ್ಟು ಕಡಿಮೆಯಾಗಿದೆ ಎಂದು ನಾನು ಕೇಳಿಕೊಂಡಿದ್ದೆ. ಅದಕ್ಕೆ ಅವರು, ಹೋಬಳಿ ಮಟ್ಟದಲ್ಲಿ ನಾವು ಮಾಡಿದ್ದೇವೆ, ನಿಮ್ಮ ಹೋಬಳಿ, ಆ ಹೋಬಳಿ ಬೇರೆ ಬೇರೆ ಆಗಿರುವುದರಿಂದ ವ್ಯತ್ಯಾಸ ಆಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಮ್ಮ ಪಕ್ಕ ಪಕ್ಕದಲ್ಲೇ ಇರತಕ್ಕಂಥ ಭೂಮಿಗಳು ಅಷ್ಟೇ

ಪ್ರಮಾಣದಲ್ಲಿ ಮಳೆಯಾಗಿರತಕ್ಕಂಥದ್ದು, ಎಲ್ಲಾ ಇದ್ದರೂ ಕೂಡ ಬಹಳಷ್ಟು ವ್ಯತ್ಯಾಸ ಏಕಾಯಿತು? ಇದರಲ್ಲಿ ದೋಷವಿದೆ ಎಂಬುದು ನನ್ನ ಅಭಿಪ್ರಾಯ. ಇದರಲ್ಲಿ ಫ್ರಾಡ್ ಆಗಿದೆ ಅಂತ ನನ್ನ ಅಭಿಪ್ರಾಯ. ಇಲ್ಲಿ ನಮ್ಮ ಜಮೀನಿಗೆ ಒಂದು ಸಾವಿರ ಪರಿಹಾರ ಸಿಕ್ಕರೆ, ಪಕ್ಕದಲ್ಲಿರತಕ್ಕಂಥ ಹುಬ್ಬಳ್ಳಿಯಲ್ಲಿ 10 ಸಾವಿರ ರೂ. ಪರಿಹಾರ ಸಿಗುವಂಥ ವ್ಯವಸ್ಥೆಯಾಗಿದೆ. ಇದರಲ್ಲಿ ಆಗಿದ್ದಂತೂ ನಿಜ. ಅಧಿಕಾರಿಗಳನ್ನು ಕೇಳಿದಾಗ, ಆಗಿದೆ ಎನ್ನುವಂಥ ಮಾತನ್ನು ಅವರು ಒಪ್ಪಿಕೊಂಡಿದ್ದರು. ಆದರೆ, ಈಗ ಮಾತ್ರ ಇದು ಸೆಂಟ್ರಲ್ ಗೌರ್ನಮೆಂಟಿದ್ದು, ನಾವು ಹೋಬಳಿ ಮಟ್ಟದಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ. ದಯಮಾಡಿ, ಅದನ್ನು ಪಂಚಾಯಿತಿ ಮಟ್ಟಕ್ಕೆ ತರಬೇಕು. ಹೋಬಳಿ ಮಟ್ಟದಲ್ಲಿ ಮಾಡಿದರೆ ಬಹಳಷ್ಟು ತೊಂದರೆಯಾಗುತ್ತದೆ. ಅದನ್ನು ಪಂಚಾಯತಿಗೆ ನಿಗದಿಪಡಿಸಿ ಅದರ ಪರಿಷ್ಕರಣೆ ಆಗುವಂಥ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಸಮರ್ಪಕವಾಗಿ ವಿಮೆಯನ್ನು ಕೊಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಕೇಳುತ್ತಿದ್ದೇನೆ. ದಯವಿಟ್ಟು, ಸಚಿವರು ಅದಕ್ಕೆ ತಾವು ಅಶೂರೆನ್ಸ್ ಕೊಡಬೇಕು. ಪಂಚಾಯಿತಿ ಮಟ್ಟದಲ್ಲಿ ಮಾಡುವಂಥ ಅಶೂರೆನ್ಸ್ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕೃಷಿ ಸಚಿವರ ಪರವಾಗಿ) : ಗೌರವಾನ್ವಿತ ಸದಸ್ಯರ ಕಳಕಳಿಯನ್ನು ನಾವು ಅರ್ಥ ಮಾಡಿಕೊಳ್ಳುತ್ತೇನೆ. ತಾವೇ ಹೇಳಿದ ಹಾಗೆ, ಈ ಹೋಬಳಿ ಮಟ್ಟದಲ್ಲಿ ಈಗೇನು ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡುತ್ತಾರೆ, ಆ ಕಾರಣಕ್ಕೆ ಕೆಲವು ಹಳ್ಳಿಗಳಿಗೆ ಭಾರಿ ನಷ್ಟವಾಗುತ್ತದೆ, ಹಾನಿಯಾಗುತ್ತದೆ. ಧಾರವಾಡ, ಸವದತ್ತಿ ಎರಡೂ ಪಕ್ಕ ಪಕ್ಕದಲ್ಲಿದ್ದರೂ ಸಹಿತ ಆ ಹೋಬಳಿಯಲ್ಲಿರತಕ್ಕಂಥ ಬೆಳೆ ಇಳುವರಿ ಪ್ರಮಾಣ ಏನಿದೆ ಅದರ ಮೇಲೆ ಈ ಇನ್‌ಶೂರೆನ್ಸ್ ಎಷ್ಟು ಬರುತ್ತದೆ, ಬಿಡುತ್ತದೆ ಎನ್ನುವುದು ನಿಗದಿಗೊಳ್ಳುತ್ತದೆ. ಇದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಜಿಐಸಿ ಯವರು ಜಂಟಿಯಾಗಿ ಮಾಡತಕ್ಕಂಥ ಒಂದು ಇನ್‌ಶೂರೆನ್ಸ್ ಸ್ಕೀಂ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ನಿರ್ಣಯ ಮಾಡಿದ್ದೇವೆ ಹಾಗೂ ಅವರಿಗೆ ಕೋರಿಕೊಂಡಿದ್ದೇವೆ. ಪಂಚಾಯಿತಿ ಮಟ್ಟದಲ್ಲೇ ಈ ಒಂದು ಹೋಬಳಿ ಬದಲಾಗಿ ನಾವು ಇಳುವರಿಯ ಪ್ರಯೋಗಗಳನ್ನು ಮಾಡಬೇಕು. ಯಾವುದೇ ಕಾರಣಕ್ಕೆ ಹೋಬಳಿ ಮಟ್ಟದಲ್ಲಿ ಮಾಡಿದರೆ ಅದರಿಂದ ರೈತರಿಗೆ ಅನಾನುಕೂಲವಾಗುತ್ತದೆ, ಲುಕ್ಸಾನಾಗುತ್ತದೆನ್ನುವ ಮಾತನ್ನು ಹೇಳಿದ್ದೇವೆ. ಈ ನಿರ್ಣಯವನ್ನು ನಾವು ಕಳೆದ ಬಾರಿ ತೆಗೆದುಕೊಂಡಿದ್ದೆವು. ಆದರೆ, ಅನುಷ್ಠಾನವಾಗುವುದರಲ್ಲಿ ತಡವಾಗಿದೆ. ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿಯನ್ನು ಘಟಕವೆಂದು ಹೇಳಿ ಹಿಡಿದುಕೊಂಡು ಬೆಳೆ ಇಳುವರಿಯ ಪ್ರಮಾಣ ತೆಗೆದುಕೊಂಡು ಅದರ ಮೇಲೆ ಇನ್‌ಶೂರೆನ್ಸ್ ಅನ್ನು ನಿಗದಿಮಾಡತಕ್ಕಂಥ ಕೆಲಸವನ್ನು ಈ ವರ್ಷದಿಂದ ಮಾಡುತ್ತೇವೆ. ಕಳೆದ ವರ್ಷ ನಾವು ನಿರ್ಣಯ ತೆಗೆದುಕೊಂಡಿದ್ದರೂ ಸಹಿತ ಹಲವಾರು ಕಾರಣಗಳಿಂದ ಅದು ಅನುಷ್ಠಾನವಾಗಿಲ್ಲ. ನಮ್ಮಲ್ಲಿ ಅಧಿಕಾರಿಗಳ ಕೊರತೆ ಇದೆ ಎಂದು ಹೇಳಿ ಅದನ್ನು ಮಾಡುವುದಕ್ಕಾಗಲಿಲ್ಲ. ಹೀಗೆ ಏನೇನೋ ಕಾರಣಗಳಿವೆ. ಆದರೆ, ಈ ವರ್ಷ ಪಂಚಾಯಿತಿಯನ್ನೇ ಘಟಕವನ್ನಾಗಿಟ್ಟುಕೊಂಡು ನಾವು ಬೆಳೆ ಇಳುವರಿ ಪ್ರಮಾಣವನ್ನು ನಿಗದಿಪಡಿಸಿ, ಇನ್‌ಶೂರೆನ್ಸ್ ಅನ್ನು ಅವರಿಗೆ ಕಮ್ಯುನಿಕೇಟ್ ಮಾಡುತ್ತೇವೆ ಎಂಬ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.